ವಸ್ತುಗಳ ಬಳಕೆಯಾಗುತ್ತದೆ. ಇವಳಿಗೆ ಸುತ್ತಲಿನ ಪ್ರತಿಯೊಂದು ಚಲನವಲನದ ಮೇಲು ಕಣ್ಣಿಡುವ ಕಲೆ ಕರಗತವಾಗಿದ್ದು ಅಲ್ಲಿಯೆ. ಮನೆಯಲ್ಲು ಅಷ್ಟೆ, ತಾನು ಕೊಂಚ ಕಮ್ಮಿ ಊಟ ಮಾಡಿದರೆ ಮಾತು ಕಮ್ಮಿ ಮಾಡಿದರೆ ಅವಳ ಗಮನಕ್ಕೆ ಹೋಗುತ್ತಿತ್ತು. ಚಿಕ್ಕ ಅಸಮಾಧಾನವನ್ನೂ ಮುಖದಲ್ಲಿ ಕಂಡುಹಿಡಿಯುತ್ತಿದ್ದಳು. ಅವಳ ಸಾಂಗತ್ಯ ತನಗೂ ಸುರಕ್ಷಾಭಾವ ಮೂಡುವಷ್ಟು ಹಿತವಾಗಿತ್ತು. ಆದರೆ, ಹನಿಮೂನ್ ಸಂದರ್ಭದಲ್ಲಿ ಆದದ್ದು ಮಾತ್ರ ಎಷ್ಟು ಮಾಡಿದರೂ ಮರೆಯಲಾಗದ ಹಿಂಸೆಯಾಗಿ ಉಳಿದುಬಿಟ್ಟಿತು. ಆ ಸುಮಂತ ಬೊಗಳಿದನಲ್ಲ, ಹಾಸಿನಿಯ ಜತೆ ಅದೆಲ್ಲ ಇತ್ತೆ ಎಂಬ ಸಂದೇಹ ಕಾಡುತ್ತಿತ್ತು. ಹೆಂಡತಿಯ ಸುಂದರ ಶರೀರ ಮನದೆದುರು ಮೂಡಿದಾಗ ಅದೊಂದು ಈರ್ಷೆಯಾಗಿ ಕೆರಳಿ ನರಳಿಸುತ್ತಿತ್ತು. ಅವಳೂ ಅದನ್ನು ಸ್ಪಷ್ಟೀಕರಿಸಿರಲಿಲ್ಲ. ಕೇಳಿಬಿಡುವ ಅಂತ ಬೇರೆಬೇರೆ ಸಂದರ್ಭದಲ್ಲಿ ಅನಿಸಿದಾಗೆಲ್ಲ ಕೊನೇಕ್ಷಣದಲ್ಲಿ ಅನಾಹುತವಾದೀತು ಅಂತ ಹಿಂದೆ ಸರಿದಿದ್ದ.

ಸಂಬಂಧ ಗಾಢವಾಗುತ್ತ ಹೋಗಿತ್ತು. ಜತೆಗೆ ವ್ಯಾಪಾರದಲ್ಲಿ ಪರಸ್ಪರರ ಸಾಹಚರ್ಯದಿಂದ ಅಪಾರ ಅಭಿವೃದ್ಧಿಯಾಗಿತ್ತು. ಹೊಸ ಮನೆ ಮಾಡುವಾಗ ಇಬ್ಬರು ಗಂಡುಮಕ್ಕಳ ತಂದೆತಾಯಿಯರಾಗಿದ್ದರು. ಹಳೆಯ ನೆನಪು ಮಾತ್ರ ಒಂದು ಹುಣ್ಣಿನಂತಾಗಿ ಕ್ರಮೇಣ ಶಾಶ್ವತ ದೌರ್ಬಲ್ಯವೆ ಆದಾಗ ಅದನ್ನೊಂದು ಗಂಟನ್ನಾಗಿ ಮಾಡಿ ಮನಸಿನಾಳದಲ್ಲಿ ತಳ್ಳಿಟ್ಟ. ಹಾಸಿನಿಗೆ ಅದರ ವಾಸನೆಯೂ ಹತ್ತಬಾರದು, ಹಾಗೆ ಆ ವಿಷಯದಲ್ಲಿ ಎಚ್ಚರಿಕೆ ವಹಿಸತೊಡಗಿದ. ಇನಕುಲ ಪುಣೆಯಲ್ಲಿ ಎಂ.ಟೆಕ್. ಮಾಡುತ್ತಿದ್ದ. ದಾವಣಗೆರೆಯಲ್ಲಿ ಬಿ.ಇ. ಕೊನೆಯ ಸೆಮಿಸ್ಟರಿನಲ್ಲಿದ್ದ ಇಂದುಸುತನನ್ನ ಆವತ್ತು ರೇಲ್ವೆಸ್ಟೇಶನ್ನಿಗೆ ಬಿಟ್ಟು ಬಂದು ಇಬ್ಬರೂ ಬೆಳಗಿನ ತಿಂಡಿ ತಿನ್ನುತ್ತಿದ್ದರು. ಮೊಬೈಲು ಸುದ್ದಿ ತಂದಿತ್ತು. ತಕ್ಷಣ ಆಸ್ಪತ್ರೆಗೆ ಧಾವಿಸಿದ್ದರು. ಐಸಿಯುದಲ್ಲಿ ಮಲಗಿದ್ದ ಮಾವನ್ನ ಗ್ಲಾಸಿನಲ್ಲಿ ನೋಡಿ ಕಾಯುತ್ತ ಕುಳಿತರು. ಮರುದಿನ ಚೇತರಿಸಿಕೊಂಡವರು ಇದ್ದದ್ದು ಎರಡೆ ದಿನ. 'ಅಪ್ಪ ದೇಹದಾನಕ್ಕೆ ರಿಜಿಸ್ಟರ್ ಮಾಡಿಕೊಂಡ ವಿಷಯ ಮೊನ್ನೆನೆ ನಂಗೆ ತಿಳಿಸಿದ್ದರು. ತಾನಿರಲ್ಲ ಅನ್ನೋ ಸೂಚನೆ ಅವರಿಗೆ ಸಿಕ್ಕಿಬಿಟ್ಟಿತ್ತು' ದುಃಖದಲ್ಲೂ ಜವಾಬ್ದಾರಿಯಲ್ಲಿ ಓಡಾಡುತ್ತಿದ್ದ ಹಾಸಿನಿಯೆದುರು 'ಅಲ್ಲ ನಾವೆಲ್ಲ ಇರುವಾಗ... ಅನಾಥರಂತೆ...' ಇವನ ತೊದಲುಮಾತು, ಗಾಬರಿ ಮಡುಗಟ್ಟಿದ ಮುಖ ಕಂಡು ಹಾಸಿನಿ ಆತಂಕದಲ್ಲಿ 'ಯಾಕ್ರೀ... ಚನ್ನಾಗಿದೀರಿ ತಾನೇ?' ವಿಚಾರಿಸುತ್ತ ಇವನನ್ನು ಕುರ್ಚಿಯ ಮೇಲೆ ಕುಳ್ಳಿರಿಸಿ ಪಕ್ಕದಲ್ಲಿ ತಾನೂ ಕುಳಿತು, 'ಅಪ್ಪನ ಕೊನೆಯಾಸೆ ಇದು. ದೇಹದಾನ ಉನ್ನತವಾದ ದಾನ. ಸತ್ತವರು ಮುಂದಿನ ಎಷ್ಟೋ ಪೀಳಿಗೆಯವರಿಗೆ ಜೀವದಾನ ಮಾಡೋದಿದು ಅಂತಿದ್ರು ಅಪ್ಪ' ಅವನಿಗೆ ಅಲ್ಲಿಂದ ತಪ್ಪಿಸಿಕೊಳ್ಳಬೇಕಿತ್ತು. ಭಾವನೆಯನ್ನು ಅಡಗಿಸಿಕೊಳ್ಳುತ್ತ ಏಕಾಂತವರಸಿ ಬಾಲ್ಕನಿಗೆ ಹೋದ. ಈ ಮರಣ ತನಗೆ ವಿಷಾದ ತಂದದ್ದು ನಿಜ. ಆದರೆ, ತನ್ನ ಪ್ರತಿಕ್ರಿಯೆ ಅತಿರೇಕವಾಗಿದ್ದರಲ್ಲಿ ಆ ಹಳೆಯ ನೆನಪೇ ಸೇರಿತ್ತು ಎಂಬುದು ಅವನಿಗರಿವಾಗಿತ್ತು. ಮರುದಿನದಿಂದ ಸಹಜಕ್ಕೆ ತಿರುಗಿ ಮುಂದಿನ ಕೆಲಸಗಳ ಎಲ್ಲ ಜವಾಬ್ದಾರಿ ವಹಿಸಿ ಮಾತಾಡಿಸಲು ಮನೆಗೆ ಬರುವವರ ಜೊತೆಯಿರಲು ಹೆಂಡತಿಗೆ ಸಮಯ ಮಾಡಿಕೊಟ್ಟ. ವಾತಾವರಣ ಮೊದಲಿನ ಸಹಜಕ್ಕೆ ತಿರುಗುತ್ತಿತ್ತು. 'ಗೊತ್ತ... ನಮ್ಮ ಇನ ಅಮೆರಿಕಕ್ಕೆ ಹೋಗಬೇಕು ಅಂತಿದಾನೆ' ಮಗನ ಸುದ್ದಿ ಹೇಳಲು ರೂಮಿಗೆ ಬಂದವಳು ಹಣಿಗೆ ತೆಗೆದುಕೊಂಡು ಇವನ ಕೂದಲು ಸರಿಪಡಿಸತೊಡಗಿದಳು. 'ನಿಂಗೆ ಒಪ್ಪಿಗೆಯ?' ಕೇಳಿದ್ದ. 'ಅವನಿಗಲ್ಲಿಯ ಆಸೆ ಇದ್ರೆ ನಾವ್ಯಾಕೆ ಅಡ್ಡಿ ಬರಬೇಕು ಅಲ್ವ... ನೀವೇನಂತೀರ?' ಅಂದವಳು, 'ಪರವಾಗಿಲ್ಲ ಕೂದಲಿನ್ನೂ ಅಷ್ಟಿಷ್ಟು ಸಮೃದ್ಧವಾಗೆ ಇದೆ. ಆದರೆ, ರಾಯರ ಹೊಟ್ಟೆನೂ ಸಮೃದ್ಧಿ ಹೊಂದತಾ ಇದೆ, ಅದು ಚಿಂತೆ' ಹೊಟ್ಟೆಯ ಮೇಲೆ ಹಣಿಗೆಯಾಡಿಸಿ ನಕ್ಕವಳು ಮತ್ತೇನೊ ನೆನಪಾಗಿ ಕೋಣೆಯಿಂದ ಹೋಗುತ್ತಿದ್ದವಳನ್ನೆ ಕೌತುಕದಲ್ಲಿ ನೋಡಿದ್ದ. ಇವಳಿಗೆ